ment to improve the situation and to solve the problems so that the Hon'ble Minister can give administrative orders to all the Revenue officers to see that this problem is solved atleast to the extent till the Central Act or the Central legislation is brought out?

SRI K. H. PATIL.—Government is seriously considering to give relief to all those who are suffering from the provisions of the Act and as a matter of fact, we have instructed the officials to see that as far as possible, if the owner of the land applies Affidavit, he may be permitted to sell in case he is in difficulty and the owner of the land is entitled to sell it to the adjoining landholders. In this way, the Government is doing without amending the Act. Government is seriously considering to abolish the Act and the matter is under serious consideration of the Government.

ಶ್ರೀ ಸಿ. ಬೈರೇಗೌಡ.—ಈ ಕಾಯ್ದೆ ಇರುವುದರಿಂದ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಲಂಚದ ಹಾವಳಿ ವಿಪರೀತವಾಗಿ ಆಗಿದೆ. ಇದನ್ನು ತಾವು ಸ್ಯಾಂಪಲ್ ಆಗಿ ತೆಗೆದುಕೊಂಡು ಕೆಲವು ಕಡೆ ಹೋಗಿ ನೋಡಿದರೆ ಗೊತ್ತಾಗುತ್ತದೆ. ಈ ಕಾಯ್ದೆ ಜಾರಿಯಲ್ಲಿರುವುದರಿಂದಲೇ ಲಂಚ ಜಾಸ್ತಿಯಾಗಿದೆ. ತಾವು ಉದಾಹರಣೆಯಾಗಿ, ಬೆಂಗಳೂರು ಸಬ್ ರಿಜಿಸ್ಟ್ರಾರ್ ಆಫೀಸ್‌ಗೆ ಹೋಗಿ ನೋಡಿದರೆ ತಮಗೆ ಗೊತ್ತಾಗುತ್ತದೆ. ರವಿನ್ಯೂ ಸೈಟ್‌ನ್ನು ರಿಜಿಸ್ಟರ್ ಮಾಡುವ ಮೂಲಕ ಈ ಕಾಯ್ದೆಯನ್ನು ಉಲ್ಲಂಘನೆ ಮಾಡಿರುವುದು ನಡೆದಿದೆ. ತಾವು ದಯಮಾಡಿ ಇದನ್ನು ಪರಿಶೀಲನೆ ಮಾಡಿದರೆ ಯಾರು ತಪ್ಪಿತಸ್ಥ ಸಬ್ ರಿಜಿಸ್ಟ್ರಾರ್ ಇರುತ್ತಾರೆ, ಅವರು ಸಿಕ್ಕಿಹಾಕಿಕೊಳ್ಳುತ್ತಾರೆ, ಅಂತಹವರ ಮೇಲೆ ತಾವು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಈ ಗಾಳಿ ಸುದ್ದಿ ಮೇಲೆಂದ ಈ ಆಕ್ಟ್‌ಗೆ ತಿದ್ದುಪಡಿ ತಂದು ಬದಲಾವಣೆ ಮಾಡಬೇಕೆಂಬುದು ಸರ್ಕಾರದ ಇಚ್ಛೆಯಾಗಿದೆ. ಈ ಹಿಂದೆ ನಮ್ಮಲ್ಲಿನ ಫ್ಯಾಕ್ಟರಿ ಆಕ್ಟ್‌ನಲ್ಲಿಯೂ ಇದೆ ರೀತಿ ನಡೆದು ನಾವು ಅದನ್ನು ಸ್ವಲ್ಪ ಸಡಿಲಗೊಳಿಸಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಲಂಚದ ಹಾವಳಿ ಎಲ್ಲಿ ನಡೆದಿದೆ ಎನ್ನುವುದನ್ನು ನಿರ್ದಿಷ್ಟವಾಗಿ ನನ್ನ ಗಮನಕ್ಕೆ ತಂದರೆ ಅಂತಹ ಸಬ್ ರಿಜಿಸ್ಟ್ರಾರ್‌ರನ್ನು ಕೂಡಲೇ ತಕ್ಷಣ ಸಸ್‌ಪೆಂಡ್ ಮಾಡುವ ಯೋಚನೆ ಮಾಡುತ್ತೇನೆ.

(ಪ್ರೋ. ಎಂ. ಡಿ. ನಂಜುಂಡಸ್ವಾಮಿಯವರು ಗೈರು ಹಾಜರಾಗಿದ್ದರು)

ವಾಯು ಮತ್ತು ನೀರಿನ ಮಾಲಿನ್ಯ

೬೦೯. ಸಿ. ಬೈರೇಗೌಡ (ವೇಮಗಲ್).—ಮಾನ್ಯ ಶಿಕ್ಷಣ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗಾಳಿ ಮತ್ತು ನೀರಿನ ಮಾಲಿನ್ಯವನ್ನು ತಡೆಗಟ್ಟುವ ಕಾನೂನು ಕರ್ನಾಟಕದಲ್ಲಿ ಜಾರಿಯಲ್ಲಿದೆಯೇ ?

ಆ) ಹಾಗಿದ್ದಲ್ಲಿ ೩ ವರ್ಷಗಳಿಂದ ತೆಗೆದುಕೊಂಡ ಕ್ರಮಗಳೇನು ? ಹಾಗೂ ಹೂಡಿದ ಮೊಕದ್ದಮೆಗಳೆಷ್ಟು ?

ಇ) ಶಿಕ್ಷೆಯಾದ ಮೊಕದ್ದಮೆಗಳು ಎಷ್ಟು ?

ಈ) ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ, ಧಾರವಾಡ, ಬೆಳಗಾಂ ನಗರಗಳಲ್ಲಿ ಗಾಳಿ ಮಾಲಿನ್ಯ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೋ ?

ಉ) ಹಾಗಿದ್ದಲ್ಲಿ ಇದನ್ನು ನಿಯಂತ್ರಿಸಲು ತೆಗೆದುಕೊಂಡ ಕ್ರಮಗಳಾವುವು ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—

ಅ) ರಾಜ್ಯದಲ್ಲಿ ಜಲ (ಮಾಲಿನ್ಯ ನಿವಾರಣಾ ಮತ್ತು ನಿಯಂತ್ರಣ) ಕಾಯ್ದೆ ೨೧.೪.೧೯೭೪ ರಿಂದ ಮತ್ತು ವಾಯು (ಮಾಲಿನ್ಯ ನಿವಾರಣ ಮತ್ತು ನಿಯಂತ್ರಣ) ಕಾಯ್ದೆ ೧೫.೧೧.೮೩ ರಿಂದ

ಮತ್ತು ಪರಿಸರ ಸಂರಕ್ಷಣಾ ಕಾಯ್ದೆ ೨೬.೫.೧೯೮೬ ರಿಂದ ಗಾಳಿ ಮತ್ತು ನೀರಿನ ಮಾಲಿನ್ಯವನ್ನು ತಡೆಯಲು ಜಾರಿಯಲ್ಲಿದೆ.

೪) ಜಲ ಮತ್ತು ವಾಯು ಮಾಲಿನ್ಯ ನಿಯಂತ್ರಣಕ್ಕಾಗಿ ಕೆಳಗೆ ಸೂಚಿಸಿದ ಕ್ರಮಗಳನ್ನು ಮಾಲಿನ್ಯ ನಿಯಂತ್ರಣ ಮಂಡಳಿಯು ದಾರ ತೆಗೆದುಕೊಳ್ಳಲಾಗಿದೆ.

೧. ಕಾಯಿದೆಯಡಿಯಲ್ಲಿ ಕೈಗಾರಿಕೆಗಳಂ ಮತ್ತು ಸ್ಥಳೀಯ ಸಂಸ್ಥೆಗಳು ಹೊಂದಿರುವ ಆದ್ಯತೆಯನ್ನು ಕುರಿತು ಅವುಗಳ ಗಮನ ಸೆಳೆಯಲು ಸೂಚನಾ ಪತ್ರಗಳನ್ನು ನೀಡುವುದು (ಷೋಕಾಸ್ ನೋಟೀಸ್ ನೀಡುವುದು).

೨. ಕೈಗಾರಿಕೆಗಳು ವಿಸರ್ಜಿಸುವ ಕಲುಷಿತ ನೀರಿಗೆ. ಕಲುಷಿತ ಗಾಳಿಗೆ ಗುಣ ಮಾನಕಗಳನ್ನು ನಿಗದಿ ಪಡಿಸುವುದು ಮತ್ತು ಮಂಡಳಿಯು ಆದೇಶಗಳನ್ನು ಪಾಲಿಸುತ್ತಿರುವ ಬಗ್ಗೆ ಪರಿವೀಕ್ಷಣೆ ಮಾಡುವುದು ಮತ್ತು ನಿಗಾ ಇಡುವುದು.

೩. ಕಲುಷಿತ ನೀರಿನ. ಗಾಳಿಯ ಸಂಸ್ಕರಣೆ ಮತ್ತು ವಿಸರ್ಜನಾ ವ್ಯವಸ್ಥೆಗೆ ತಾಂತ್ರಿಕ ಸಲಹೆ ನೀಡುವುದು.

೪. ಕಲುಷಿತ ನೀರಿನ. ಕಲುಷಿತ ವಾಯುವಿನ ಸಂಸ್ಕರಣೆ ಮತ್ತು ವಿಸರ್ಜನಾ ವ್ಯವಸ್ಥೆಯ ಕೆಲಸಗಳ ಪ್ರಗತಿಯನ್ನು ಪರಿಶೀಲಿಸುವುದು.

೫. ಕಲುಷಿತ ನೀರಿನ. ಕಲುಷಿತ ವಾಯುವಿನ ಮಾದರಿಗಳನ್ನು ಸಂಗ್ರಹಿಸಿ ಮಂಡಳಿಯ ಪ್ರಯೋಗ ಶಾಲೆಯಲ್ಲಿ ಅವರ ಮಾಲಿನ್ಯದ ಗುಣಮಟ್ಟವನ್ನು ವಿಶ್ಲೇಷಿಸುವುದು.

೬. ಕಾಯಿದೆಯನ್ನು ಉಲ್ಲಂಘಿಸುವ ಕೈಗಾರಿಕೆಗಳ ಕಾರಣ ಕೇಳಿ ಷೋಕಾಸ್ ನೋಟೀಸ್ ನೀಡುವುದು.

೭. ಮಾಲಿನ್ಯವಾಗಿದೆ ಎಂದು ಮನವರಿಕೆಯಾದಗ ಕಲುಷಿತ ನೀರಿನ ವಿಸರ್ಜನೆಯನ್ನು ಪ್ರತಿಬಂಧಿಸಿ ಪ್ರತಿಬಂಧಕಾಜ್ಞೆಯನ್ನು ನೀಡುವುದು.

೮ ಕಾಯಿದೆಯಂ ನಿಯಮಾವಳಿಯನ್ನು ಉಲ್ಲಂಘಿಸುವ ಕೈಗಾರಿಕೆಗಳ. ವಿರುದ್ಧ ಮೊಕದ್ದಮೆಗಳನ್ನು ಹೂಡುವುದು.

೯. ಉದ್ದೇಶಿತ ಕೈಗಾರಿಕೆಗಳ ಜಲ ಮತ್ತು ವಾಯು ಮಾಲಿನ್ಯ ನಿಯಂತ್ರಣ ದೃಷ್ಟಿಕೋನದಲ್ಲಿ ಸಮ್ಮತಿ ಪತ್ರಗಳನ್ನು ನೀಡುವುದು.

೧೦. ರೋಟರಿ ಸಂಸ್ಥೆ, ರಾಷ್ಟ್ರೀಯ ಉತ್ಪಾದಕ ಪರಿಷತ್ತು, ಕೇಂದ್ರ ಮಂಡಳಿ ಹಾಗೂ ಇನ್ನಿತರ ಸಾರ್ವಜನಿಕ ಸಂಸ್ಥೆಗಳು ಏರ್ಪಡಿಸುವ ವಿಚಾರ ಸಂಕೀರ್ಣ ಮತ್ತು ತಾಂತ್ರಿಕ ವಿಷಯಗಳ, ಚರ್ಚೆ, ಉಪನ್ಯಾಸಗಳಲ್ಲಿ ಭಾಗವಹಿಸುವುದು.

೧೧. ಸಾರ್ವಜನಿಕರಲ್ಲಿ ಜಲ ಮತ್ತು ವಾಯು ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆಯ ಬಗ್ಗೆ ತಿಳುವಳಿಕೆ ನೀಡುವುದು.

ಮಂಡಳಿಯು ಕಳೆದ ೩ ವರ್ಷಗಳಲ್ಲಿ ಜಲ ಮಾಲಿನ್ಯ ನಿಯಂತ್ರಣ ಕಾಯಿದೆಯಡಿ ೫೮ ಪ್ರಕರಣಗಳು ಮತ್ತು ವಾಯು ಮಾಲಿನ್ಯ ನಿಯಂತ್ರಣ ಕಾಯಿದೆಯಡಿ ೩೦ ಮೊಕದ್ದಮೆಗಳನ್ನು ವಿವಿಧ ನ್ಯಾಯಾಲಯಗಳಲ್ಲಿ ಹೂಡಿದೆ.

೫) ಯಾವುದೂ ಇಲ್ಲ.

೬) ಬೆಂಗಳೂರಿನ ಆನಂದರಾವ್ ವೃತ್ತದ ಬಳಿ ಹೊರತಾಗಿ, ಬೆಂಗಳೂರು, ಮತ್ತು ಮೈಸೂರು ನಗರದಲ್ಲಿ ವಾಯುವಿನ ಗುಣಮಟ್ಟ ಸಾಮಾನ್ಯವಾಗಿ ನಿಗದಿಪಡಿಸಿದ ಗುಣಮಟ್ಟವನ್ನು ಮೀರಿಲ್ಲ. ಇತರೆ ನಗರಗಳಲ್ಲಿ ವಾಯುವಿನ ಪರೀಕ್ಷೆ ಇನ್ನೂ ನಡೆಸಬೇಕಾಗಿದೆ.

೭) ಮಂಡಳಿಯು ಹುಬ್ಬಳ್ಳಿ, ಧಾರವಾಡ, ಬೆಳಗಾಂ, ನಗರಗಳಲ್ಲಿ ವಾಯುಂ ಮಾಲಿನ್ಯ ಪರೀಕ್ಷಣಾ ಕೇಂದ್ರಗಳನ್ನು ಶೀಘ್ರದಲ್ಲೇ ತೆಗೆಯಲಾಗುವುದು.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ, ನಾನು ಕಳೆದ ಮೂರು ವರ್ಷಗಳಿಂದ ತೆಗೆದುಕೊಂಡ ಕ್ರಮಗಳೇನು ಎಂದು ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಅಂತಹ ಕೈಗಾರಿಕೆಗಳ ವಿರುದ್ಧ ಮೊಕದ್ದಮೆಗಳನ್ನು ಹೂಡುವುದು ಎಂದು ಈ ಉತ್ತರ ನೋಡಿದ ತಕ್ಷಣ ಗೊತ್ತಾಗುತ್ತದೆ. ಎಷ್ಟರ ಮಟ್ಟಿಗೆ ನಮ್ಮ ರಾಜ್ಯದಲ್ಲಿ ಇದಂ ಜಾರಿಗೆ ಬಂದಿದೆ ಎನ್ನುವುದು ವೇದ್ಯವಾಗುತ್ತದೆ.

ಮತ್ತು ಮೊಕದ್ದಮೆಗಳನ್ನು ಹೂಡಿ ಆ ಮೊಕದ್ದಮೆಗಳಿಂದ ಶಿಕ್ಷೆಯಾದವರ ಸಂಖ್ಯೆ ಎಷ್ಟು ಎಂದು ನಾನು ಕೇಳಿದ್ದಕ್ಕೆ ತಾವು ತಮ್ಮ ಉತ್ತರದಲ್ಲಿ ಯಾವುದೂ ಇಲ್ಲ ಎನ್ನುವ ಮಾತನ್ನು ಹೇಳಿದ್ದೀರಿ. ಇಂತಹ ಪರಿಸ್ಥಿತಿ ಬರಬೇಕಾದರೆ ಇದು ಕಾನೂನಿನಿಂದ ತಪ್ಪಿಸಿಕೊಳ್ಳತಕ್ಕಂಥ ಲೂಪ್ ಹೋಲ್ಸ್ ಏನಾದರೂ ಇವೆಯೇ? ಅಥವಾ ನಿಮ್ಮ ಇಲಾಖೆಯ ಸಿಬ್ಬಂದಿ ವರ್ಗದವರು ಸರಿಯಾದ ರೀತಿಯಲ್ಲಿ ಇನ್‌ವೆಸ್ಟಿಗೇಶನ್ ಮಾಡಲಿಲ್ಲವೇ? ಹಾಗೂ ನ್ಯಾಯಾಲಯದ ಮುಂದೆ ಹೋಗಲಿಲ್ಲವೇ? ಅಥವಾ ಈ ಇನ್‌ವೆಸ್ಟಿಗೇಶನ್ ಮಾಡುವುದಕ್ಕೆ ನಿಮ್ಮ ಇಲಾಖೆಯಲ್ಲಿ ನನಗೆ ತಿಳಿದ ಮಟ್ಟಿಗೆ ಸರಿಯಾದ ಸಿಬ್ಬಂದಿ ಇಲ್ಲ ಎಂದು ಕಂಡು ಬಂದಿದೆ. ಆದ್ದರಿಂದ ತಾವು ಈ ಇಲಾಖೆಗೆ ಹೆಚ್ಚು ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ಎನ್ನುವುದಕ್ಕೆ ನನಗೆ ಉತ್ತರ ಬೇಕು.

ಶ್ರೀ ಕೆ.ಹೆಚ್. ರಂಗನಾಥ್.— ತಮಗೆ ಗೊತ್ತಿದ್ದ ಹಾಗೆ ಕ್ರಿಮಿನಲ್ ಕೇಸ್ ಸಾಬೀತಾಗ ಬೇಕಾಗಿದೆ. ಸಾಬೀತಾಗದಿದ್ದರೆ ಕೋರ್ಟ್‌ನಲ್ಲಿ ಕೇಸ್ ಅಕ್ವಿಟ್ ಆಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರ ಊಹೆ ಏನಿದೆ ಅದು ಸಕಾರಣವಾದ ಊಹೆಯಲ್ಲ.

ಶ್ರೀ ಸಿ. ಬೈರೇಗೌಡ.— ಇನ್ನೂ ಒಂದು ಪ್ರಶ್ನೆ ಇದೆ ಈ ಇಲಾಖೆಯಲ್ಲಿ ಸಾಕಷ್ಟು ಸಿಬ್ಬಂದಿ ಇಲ್ಲವೆಂದು ಗೊತ್ತಾಗಿದೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈ ಇಲಾಖೆಗೆ ಕೆಲವು ಸಲಕರಣೆಗಳು ಸಹಾ ಬೇಕಾಗುತ್ತವೆ, ಆ ಕಾರಣದಿಂದ ನಿಮ್ಮ ಕೇಸ್‌ಗಳು ನ್ಯಾಯಾಲಯದ ಮುಂದೆ ಹೋದಾಗ ಆ ನ್ಯಾಯಾಲಯದಲ್ಲಿ ನಿಲ್ಲುವುದಿಲ್ಲವೆಂದು ನನ್ನ ಭಾವನೆ, ಅದು ಸರಿಯೋ ತಪ್ಪೋ ಎಂದು ತಿಳಿಸುತ್ತೀರಾ? ಸಿಬ್ಬಂದಿ ಕೊರತೆಯನ್ನು ತಪ್ಪಿಸತಕ್ಕ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಕೆ.ಹೆಚ್. ರಂಗನಾಥ್.— ಈ ಕಾನೂನುಗಳೆಲ್ಲಾ ಹೊಸದು ತಮಗೆ ತಿಳಿದ ಹಾಗೆ ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಕಾಯಿದೆ ೧೯೭೪ ರಿಂದ ಜಾರಿಯಲ್ಲಿದೆ. ತದ ನಂತರ ಪರಿಸರದ ಸಂರಕ್ಷಣೆ ಕಾಯಿದೆ ಜಾರಿಯಲ್ಲಿ ಬಂದಿದ್ದು ೧೯೮೬ರಲ್ಲಿ. ಈ ಎಲ್ಲಾ ಕಾನೂನುಗಳೆಲ್ಲಾ ಹೊಸದಾಗಿರುವುದರಿಂದ ಕೆಲವು ತಪ್ಪುಗಳು ಆಗುತ್ತಿರಬಹುದು. ಆದರೆ ಮಾನ್ಯ ಸದಸ್ಯರ ಅಭಿಮತದ ಪ್ರಕಾರ ಈ ಇಲಾಖೆಯಲ್ಲಿ ಸಾಕಷ್ಟು ಸಿಬ್ಬಂದಿ ಇಲ್ಲವೆಂದು ಏನು ಹೇಳಿದ್ದಾರೆ, ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ.— ಮತ್ತೆ ಬೆಂಗಳೂರಿನ ಆನಂದರಾವ್ ಸರ್ಕಲ್‌ನಲ್ಲಿ ಮಾತ್ರ ಗಾಳಿ ಮಾಲಿನ್ಯ ಹೆಚ್ಚಾಗಿರುವುದೆಂದು ಹೇಳಿದ್ದೀರಿ. ಆದರೆ ಕಾರ್ಪೊರೇಷನ್ ಆಫೀಸ್ ಎದುರುಗಡೆ ಶಿವಾಜಿನಗರ ಬಸ್‌ಸ್ಟಾಂಡ್ ಹತ್ತಿರ, ಸುಭಾಷ್ ನಗರ ಬಸ್ ಸ್ಟಾಂಡ್ ಹತ್ತಿರ ದಿನದಲ್ಲಿ ಕೆಲವು ಗಂಟೆಗಳ ಕಾಲ ಅಲ್ಲಿ ಹೋಗಬೇಕಾದರೆ ಮೂಗು ಮುಚ್ಚಿಕೊಂಡು ಹೋಗಬೇಕಾಗುತ್ತದೆ. ಇಂಥಾ ಪರಿಸ್ಥಿತಿ ನಗರದಲ್ಲಿ ಇರುವಾಗ ಇದು ಟಾಲರಬಲ್ ಲಿಮಿಟ್ಸ್‌ನಲ್ಲಿ ಇದೆಯೆಂದು ಉತ್ತರ ಬಂದಿದೆ. ಇದನ್ನು ಪುನರ್ ಪರಿಶೀಲನೆ ಮಾಡಿ ಯಾವ ಯಾವ ವಾಹನಗಳಿಂದ ಗಾಳಿ ಮಾಲಿನ್ಯವಾಗುತ್ತದೋ ಅಂಥಾ ವಾಹನಗಳ ಮಾಲೀಕರ ಮೇಲೆ ಸರ್ಕಾರದವರು ಕ್ರಮ ತೆಗೆದುಕೊಳ್ಳುತ್ತಾರೆಯೇ?

ಶ್ರೀ ಕೆ.ಹೆಚ್. ರಂಗನಾಥ್.— ಈ ಸಲಹೆಯನ್ನು ಪರಿಶೀಲನೆ ಮಾಡಲಾಗುವುದು.

ಅಧ್ಯಕ್ಷರು.— ಶ್ರೀ ಕರಿಯಣ್ಣನವರು.

(ಮಾನ್ಯ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ)

ಅಧ್ಯಕ್ಷರು.— ಶ್ರೀ ಡಿ.ಎ. ಚಿನ್ನಪ್ಪನವರು.

ಚುಕ್ಕೆ ಪ್ರಶ್ನೆ ಸಂಖ್ಯೆ: ೨೩೧ (೭೩೦)

ಕೋಟೆ ಹಾಗೂ ನಗರ ಸಭೆ ಕಟ್ಟಡದ ಜೀರ್ಣೋದ್ಧಾರ

೭೩೦. ಶ್ರೀ ಡಿ.ಎ. ಚಿನ್ನಪ್ಪ (ಮಡಿಕೇರಿ).— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೇ.—

ಅ) ಮಡಿಕೇರಿಯಲ್ಲಿ ಕಂದಾಯ ಕಚೇರಿಗಳು, ತಹಶೀಲ್ದಾರ್ ಕಚೇರಿ ಕಟ್ಟಡಗಳನ್ನು ಜೀರ್ಣೋದ್ಧಾರ ಮಾಡಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಜಿಲ್ಲಾಧಿಕಾರಿಗಳ ಕಚೇರಿ ಮತ್ತು ಉಪ ವಿಭಾಗಾಧಿಕಾರಿಗಳ ಕಚೇರಿಯ ಕಟ್ಟಡಗಳಿಗೆ ಖರ್ಚು ಮಾಡಲಾದ ಹಣವೆಷ್ಟು;